# ದಕ್ಷ ಮಂತ್ರಿ ಕೆ.ಲಕ್ಕಪ್ಪನವರು



ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ಕಾಂತರಾಜಪುರದ ರೈತಾಪಿ ಕುಟುಂಬದಲ್ಲಿ 1912 ಅಕ್ಟೋಬರ್ 20 ರಲ್ಲಿ ಜನಿಸಿದರು. ತಂದೆ ಶ್ರೀ ಕೆ.ಕಾಳೇಗೌಡರು, ತಾಯಿ ಮಾಳಮ್ಮ. ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮದಲ್ಲಿ ಪಡೆದ ಇವರು ಪ್ರೌಢಶಿಕ್ಷಣವನ್ನು ಹಾಸನದಲ್ಲೂ, ಕಾನೂನು ಶಾಸ್ತ್ರದ ಪದವಿಯನ್ನು ಪೂನಾ(ಮಹಾರಾಷ್ಟ್ರ)ದಲ್ಲಿ ಪಡೆದರು.

ಸಾಮಾಜಿಕ ಕಳಕಳಿ ಹೊಂದಿದ್ದ ಇವರು ಕೆಲಕಾಲ ವಕೀಲ ವೃತ್ತಿ ಅವಲಂಬಿಸಿದ್ದರು. ರಾಷ್ಟ್ರಪಿತ ಬಾಪೂಜಿಯವರ ಆದರ್ಶ ಸಾಧನೆಗೆ ಓಗೊಟ್ಟು, ರಾಷ್ಟ್ರ ನಿರ್ಮಾಣದ ಧೀಕ್ಷೆ ತೊಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮತ್ತು ಪ್ರಜಾ ಯೋಗಕ್ಷೇಮ ಕಾರ್ಯಕ್ರಮಗಳಲ್ಲಿ ಸಕ್ರಿಯರಾದರು. 1942 ರಲ್ಲಿ ರಾಷ್ಟ್ರೀಯ ಕಾಂಗ್ರೇಸ್ ಸದಸ್ಯರಾಗಿ, ಹಾಸನ ಜಿಲ್ಲಾ ಕಾಂಗ್ರೇಸ್ ಕಮಿಟಿಯ ಅಧ್ಯಕ್ಷರಾಗಿ ಸಕ್ರಿಯ ರಾಜಕಾರಣಕ್ಕೆ ದುಮುಕಿದರು. 1944 ರಿಂದ 1947 ರವರೆಗೆ ಹಾಸನ ಜಿಲ್ಲಾ ಬೋರ್ಡ್‌ನ ಅಧ್ಯಕ್ಷರಾಗಿ ಜಿಲ್ಲೆಗೆ ಗಮನಾರ್ಹ ಸೇವೆ ಸಲ್ಲಿಸಿದರು. ನಂತರ 1964 ರಲ್ಲಿ ಮೈಸೂರು ಪ್ರದೇಶ ಕಾಂಗ್ರೇಸ್ ಕಮಿಟಿಯ ಜನರಲ್ ಸೆಕ್ರೆಟರಿಯಾಗಿ, ರೋಟರಿ ಸಂಸ್ಥೆಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಇದೇ ಸಂದರ್ಭದಲ್ಲಿ ಬೆಂಗಳೂರು ವಸ್ತು ಪ್ರದರ್ಶನ ಕಮಿಟಿಯ ಅಧ್ಯಕ್ಷರಾಗಿದ್ದರು. ನಂತರ ಐದು ವರ್ಷಗಳ ಕಾಲ ವಿಧಾನ ಸಭಾ ಸದಸ್ಯರಾಗಿಯೂ, ಹಾಸನ ಜಿಲ್ಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1966 ರಲ್ಲಿ ವಿಧಾನಪರಿಷತ್ತಿಗೆ ಚುನಾಯಿತರಾಗಿ, ಶ್ರೀ ವೀರೇಂದ್ರ ಪಾಟೀಲರ ಸಚಿವ ಸಂಪುಟದಲ್ಲಿ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಸಚಿವರಾಗಿ ರಾಜ್ಯಕ್ಕೆ ಗಮನಾರ್ಹ ಸೇವೆ ಸಲ್ಲಿಸಿದರು.

ಗ್ರಾಮೀಣಾಭಿವೃದ್ಧಿ, ಶೈಕ್ಷಣಿಕ ಕ್ಷೇತ್ರ ಮತ್ತು ಕೈಗಾರಿಕಾಭಿವೃದ್ಧಿಯಲ್ಲಿ ಆಸಕ್ತಿಯಿದ್ದ ಶ್ರೀ ಲಕ್ಕಪ್ಪನವರು ಸ್ವಗ್ರಾಮ ಕಾಂತರಾಜಪುರದಲ್ಲಿ ಪಾನ ನಿರೋಧ ನೀತಿಯನ್ನು ಕಾರ್ಯರೂಪಕ್ಕೆ ತಂದಿದ್ದರು. ಈ ನೀತಿಯನ್ನು ರಾಜ್ಯದಾದ್ಯಂತ ಜಾರಿಗೆ ತರಬೇಕೆಂಬ ಹಂಬಲ ಹೊಂದಿದ್ದರು. ತಮ್ಮ ವಿಶ್ರಾಂತ ಜೀವನವನ್ನು ಶ್ರೀ ಆದಿಚುಂಚನಗಿರಿ ಮಠದ ಸೇವೆಗಾಗಿ ವಿನಿಯೋಗಿಸಿ, ಹಾಸನದ ಶ್ರೀ ಆದಿಚುಂಚನಗಿರಿ ಕಲ್ಯಾಣ ಮಂಟಪದ ಸ್ಥಾಪನೆಗೆ ಮತ್ತು ಹಾಸನದ ಒಕ್ಕಲಿಗರ ವಿದ್ಯಾರ್ಥಿನಿಲಯದ ವಿಶೇಷ ವ್ಯವಸ್ಥೆಗೆ ಶ್ರಮಿಸಿದರು. ಇವರು ಶೈಕ್ಷಣಿಕ ಕ್ಷೇತ್ರದಲ್ಲಿ ಹೊಂದಿದ್ದ ಆಸಕ್ತಿಯ ಫಲವಾಗಿ ಹಾಸನದ ಮಲೆನಾಡು ತಾಂತ್ರಿಕ ವಿದ್ಯಾಸಂಸ್ಥೆಯು ಸ್ಥಾಪಿತವಾಯಿತು. ಇವರು ಈ ಸಂಸ್ಥೆಯ ಸ್ಥಾಪಕ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಇವರ ಮಾರ್ಗದರ್ಶನ ಮಲೆನಾಡು ವಿದ್ಯಾಸಂಸ್ಥೆಗೆ ಒಂದು ಕೊಡುಗೆಯಾಗಿದೆ.

ಶ್ರೀ ಲಕ್ಕಪ್ಪನವರ ಉತ್ಸಾಹ ರಾಜಕೀಯಕ್ಕೆ ಸೀಮಿತವಾಗಿರದೆ, ಹಾಸನ, ಬೆಂಗಳೂರುಗಳಲ್ಲಿ ಕೈಗಾರಿಕಾ ಕ್ಷೇತ್ರಕ್ಕೂ ವಿನಿಯೋಗವಾಗಿದೆ. ಹಾಸನದ ಭಾರತಿ ಕಾಫೀಕ್ಯೂರಿಂಗ್ ವರ್ಕ್ಸ್ , ಮಿಶನ್ ಕಾಂಪೋನೆಂಟ್ಸ್ ಬೆಂಗಳೂರು ಮುಂತಾದ ಕೈಗಾರಿಕೆಗಳನ್ನು ಸ್ಥಾಪಿಸಿದ್ದಾರೆ. ಜನಸೇವೆ, ದೇಶಸೇವೆ, ವಿದ್ಯಾದಾನ, ಗ್ರಾಮೀಣಾಭಿವೃದ್ದಿಯ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದ ಲಕ್ಕಪ್ಪನವರು, ತಮ್ಮ 79 ನೇ ವಯಸ್ಸಿನಲ್ಲಿ ಪತ್ನಿ ಚೆನ್ನಮ್ಮ, ಮೂವರು ಪುತ್ರರು ಮತ್ತು ಇಬ್ಬರು ಪುತ್ರಿಯರನ್ನಗಲಿ ದಿನಾಂಕ: 23-11-1991 ರಲ್ಲಿ ದೈವಾದೀನರಾದರು.

ಇವರ ತಂದೆ ಕೆ.ಕಾಳೇಗೌಡರು ಸ್ವಾತಂತ್ರ್ಯ ಪೂರ್ವದಲ್ಲಿ (ಸು.1910 ರಲ್ಲಿ) ಊರಿಗೆ ಪ್ರಾಥಮಿಕ ಶಾಲೆಯನ್ನು ಧರ್ಮಾರ್ಥವಾಗಿ ಕಟ್ಟಿಸಿ, ಊರಿನ ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದರು. ಊರಿನ ಉತ್ತರಕ್ಕೆ ದನಕರುಗಳ ನೀರಿನ ಸೌಲಭ್ಯಕ್ಕಾಗಿ ಒಂದು ಕಟ್ಟೆಯನ್ನು ಕಟ್ಟಿಸಿದ್ದಾರೆ. ಜನರು ಈಗಲೂ ಇದನ್ನು ಕಾಳೇಗೌಡರ ಕಟ್ಟೆ ಎಂದು ಕರೆಯುತ್ತಿದ್ದಾರೆ.